# ರೆಮ್ಸ್ ಸಂಸ್ಥೆಗೆ ರಾಷ್ಟ್ರೀಯ ಗೌರವ

**ಈ. ನಾಗರಾಜ**
ಬೆಂಗಳೂರು.

ನವದೆಹಲಿಯಲ್ಲಿ 19-20ನೇ ಆಗಸ್ಟ್ 2016ರಂದು ಭಾರತೀಯ ಗುಣಮಟ್ಟ ಪರಿಷತ್‌ನ ಸಮ್ಮೇಳನದಲ್ಲಿ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸಸ್ ರಾಷ್ಟ್ರದ ಪ್ರತಿಷ್ಠಿತ ''ಡಿಎಲ್ ಶಾ-ಪ್ಲಾಟಿನಂ'' ಪ್ರಶಸ್ತಿ ಲಭಿಸಿದೆ. ರೆಮ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಮನೋಜ್ ರಾಜನ್ ಅವರು ಕೇಂದ್ರ ಸರ್ಕಾರದ ಸನ್ಮಾನ್ಯ ನಾಗರೀಕ ವಿಮಾನಯಾನ ರಾಜ್ಯ ಖಾತೆ ಸಚಿವರಾದ ಶ್ರೀ ಜಯಂತ್ ಸಿನ್ಹಾ ಅವರಿಂದ 11ನೇ ನ್ಯಾಷನಲ್ ಕ್ವಾಲಿಟಿ ಕಾನ್‌ಕ್ಲೇವ್ (ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ - 2016) ಪ್ರಶಸ್ತಿಯನ್ನು ಸ್ವೀಕರಿಸಿದರು.

ರಾಷ್ಟ್ರಮಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶ್ವದ ಪ್ರತಿಷ್ಠಿತ ಕಂಪನಿಗಳ ನಾಯಕರು, ಪರಿಣಿತ ಖಾಸಗಿ ಸಂಸ್ಥೆಗಳ ತಜ್ಞಪ್ರತಿನಿಧಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸೌಮ್ಯದ ಸಂಸ್ಥೆಗಳ ಪ್ರತಿನಿಧಿಗಳು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಖ್ಯಾತ ಸಂಸ್ಥೆಗಳ ಪ್ರತಿನಿಧಿಗಳು, ದೇಶ ಮತ್ತು ವಿದೇಶಗಳಲ್ಲಿ ವಿವಿಧ ವಲಯ ಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ, ಹಿರಿಯ ಶಿಕ್ಷಣ ತಜ್ಞರು ಹಾಗೂ ಆರೋಗ್ಯ ಶಿಕ್ಷಣ, ಉದ್ದಿಮೆ ಮತ್ತು ಮಾರಾಟ ಕ್ಷೇತ್ರಗಳಿಂದ ಗುಣಮಟ್ಟ ಮೌಲ್ಯವರ್ಧನೆಯಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಒಂದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು 11ನೇ ರಾಷ್ಟ್ರೀಯ ಗುಣಮಟ್ಟದ ಸಮ್ಮೇಳನ ದಲ್ಲಿ ಭಾಗವಹಿಸಿದ್ದರು.

ನ್ಯಾಷನಲ್ ಕ್ವಾಲಿಟಿ ಕಾನ್ ಕ್ಲೇವ್‌ನಲ್ಲಿ ಪ್ರಸ್ತಾಪಿತ ಪ್ರಮುಖ ವಿಷಯ ''ದೇಶದ 126 ಕೋಟಿ ನಾಗರೀಕರಿ ಗಾಗಿ ಗುಣಮಟ್ಟ ಅಭಿವೃದ್ಧಿ'' ಈ ವಿಷಯದ ಮೇಲೆ 4 ಮಂದಿ ಪ್ರಮುಖ ಭಾಷಿಕರಲ್ಲಿ ಒಬ್ಬರಾಗಿ ರೆಮ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮನೋಜ್ ರಾಜನ್ ಭಾಗವಹಿಸಿದ್ದರು.

ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಕೃಷಿ ಉತ್ಪನ್ನ ಮಾರಾಟಕ್ಕೆ ಕರ್ನಾಟಕ ರಾಜ್ಯ ಅನುಸರಿಸಿದ ಮಾರ್ಗಸೂಚಿ ಮತ್ತು ಅನುಷ್ಠಾನದಿಂದ ಕೃಷಿ ಉತ್ಪನ್ನ ಮಾರುಕಟ್ಟೆಗಳ ಆಧುನೀಕರಣಗೊಂಡಿರುವ ಬಗ್ಗೆ ಪ್ರಸ್ತಾಪಿಸಿದರು. ಈ ವೇಳೆ ನಮ್ಮ ಬೆಳೆ - ನಮ್ಮ ಬೆಲೆಗಾಗಿ, ''ಕೃಷಿ ಉತ್ಪನ್ನ ಮಾರಾಟಕ್ಕೆ ಆನ್‌ಲೈನ್ ವ್ಯವಸ್ಥೆ - ಕರ್ನಾಟಕ ಮಾದರಿ'' ಎಂಬ ವಿಷಯದ ಮೇಲೆ ಪ್ರಾತ್ಯಕ್ಷಿಕೆಯ ಮೂಲಕ ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಬೃಹತ್ ಮಟ್ಟ ಪ್ರತಿನಿಧಿಗಳಿಗೆ ಸಮಗ್ರ ಮಾಹಿತಿಯನ್ನು ಅವರು ನೀಡಿದರು.

ಕರ್ನಾಟಕ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆಯನ್ನು ನೂತನ ತಂತ್ರಜ್ಞಾನ ಬಳಕೆಯಿಂದ ಸ್ಥಾಪಿಸಿರುವ ಬಗ್ಗೆ ಸಮಗ್ರ ಮಾಹಿತಿ ನೀಡಿದ ಶ್ರೀ ಮನೋಜ್ ರಾಜನ್ ಅವರು ಈ ವೇದಿಕೆ ಅಡಿಯಲ್ಲಿ ವ್ಯಾಪಾರ ವಹಿವಾಟು ನಡೆಯುವ, ಉತ್ಪನ್ನಗಳ ಗುಣಮಟ್ಟಕ್ಕೆ ಹೆಚ್ಚು ಆದ್ಯತೆ ನೀಡಿರುವ ಬಗ್ಗೆ ವಿವರಿಸಿದರು.

ರಾಜ್ಯ ವ್ಯಾಪ್ತಿಯ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಗಳಲ್ಲಿನ ಉತ್ಪನ್ನಗಳ ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಖರೀದಿದಾರರಿಗೆ ಏಕೀಕೃತ ಲೈಸೆನ್ಸ್ ನೀಡಿರುವುದು ಹಾಗೂ ಹೊರ ರಾಜ್ಯದ ವರ್ತಕರಿಗೆ ಅರ್ಹತೆಯ ಆಧಾರದ ಮೇಲೆ ಲೈಸೆನ್ಸ್ ನೀಡುತ್ತಿರುವ ಬಗ್ಗೆ ವಿವರಿಸಿದರು. ಏಕೀಕೃತ ಮಾರುಕಟ್ಟೆ ವೇದಿಕೆ ಸ್ಥಾಪನೆ ಯಾಗಿರುವ ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಉತ್ಪನ್ನಗಳ ಆನ್‌ಲೈನ್ ಟ್ರೇಡಿಂಗ್‌ನಿಂದಾಗಿ, ಮಾರಾಟ ವ್ಯವಸ್ಥೆಯ ಎಲ್ಲಾ ಹಂತಗಳನ್ನು ಗಣಕೀಕರಣ ಮಾಡಲಾಗುತ್ತಿದೆ. ಇದರಿಂದಾಗಿ ಕೃಷಿ ಉತ್ಪನ್ನ ಮಾರಾಟ ವಲಯದಲ್ಲಿ ಪಾರದರ್ಶಕತೆ, ದಕ್ಷತೆ ಹಾಗೂ ಸರಳತೆಯ ವಾತಾವರಣ ಸೃಷ್ಟಿಯಾಗಿದೆ ಎಂದು ತಿಳಿಸಿದರು.

ರೈತ ಬಾಂಧವರು ಕೃಷಿ ಉತ್ಪನ್ನಗಳನ್ನು ಏಕೀಕೃತ ಮಾರುಕಟ್ಟೆ ವೇದಿಕೆಗೆ ಮಾರಾಟಕ್ಕೆ ತಂದ ವೇಳೆ ಉತ್ಪನ್ನಗಳ

ಗುಣಪರೀಕ್ಷೆ ಮಾಡಿಸಿಕೊಳ್ಳಲು ಅನುಕೂಲ ಕಲ್ಪಿಸುತ್ತಿರುವ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಇದಕ್ಕಾಗಿಯೇ ಮಾರುಕಟ್ಟೆಗಳಲ್ಲಿ ವಿಶೇಷ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಹೇಳಿದರು. ಈಗಾಗಲೇ 10 ಮಾರುಕಟ್ಟೆಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಹಂತ ಹಂತವಾಗಿ ಎಲ್ಲಾ ಯುಎಂಪಿ ಮಾರುಕಟ್ಟೆಗಳಲ್ಲಿ ಈ ವ್ಯವಸ್ಥೆಯನ್ನು ಒದಗಿಸಲಾಗುವುದು. ಈ ವ್ಯವಸ್ಥೆಯ ಲಾಭ ಪಡೆಯಲು ರೈತರು ಆರ್ಥಿಕ ವೆಚ್ಚ ಭರಿಸುವ ಅಗತ್ಯವಿಲ್ಲ. ಉಚಿತವಾಗಿ ಈ ಸೇವೆಯನ್ನು ರೈತರಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ನೀಡಲಾಗುತ್ತದೆ.

ರೈತರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಸ್ಥಾಪಿಸಿರುವ ಉತ್ಪನ್ನಗಳ ಗುಣಮಟ್ಟ ಪರೀಕ್ಷೆ ಮಾಡಿಸಿಕೊಂಡರೆ, ಆ ಉತ್ಪನ್ನದ ಸಂಪೂರ್ಣ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಪ್ರಸಾರ ಮಾಡಲಾಗುತ್ತಿದೆ. ದೂರದ ಖರೀದಿದಾರರು ಉತ್ಪನ್ನದ ಗುಣಮಟ್ಟವನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಿ, ಉತ್ಪನ್ನಗಳನ್ನು ಖರೀದಿಸಲು ಹೆಚ್ಚು ಸಂಖ್ಯೆಯಲ್ಲಿ ವರ್ತಕರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಇದರಿಂದ ಉತ್ಪನ್ನಗಳ ಖರೀದಿಯಲ್ಲಿ ಸ್ಪರ್ಧೆ ಹೆಚ್ಚಾಗಿ ರೈತರ ಉತ್ಪನ್ನಕ್ಕೆ ಸ್ಪರ್ಧಾತ್ಮಕ ಬೆಲೆ ಲಭ್ಯವಾಗುವಂತಾಗಿದೆ ಎಂದು ಶ್ರೀ ಮನೋಜ್ ರಾಜನ್ ಸಮ್ಮೇಳನದಲ್ಲಿ ವಿವರಿಸಿದರು.

ಕರ್ನಾಟಕ ಸರ್ಕಾರದ ರೈತಪರ ಮಹತ್ವಾಕಾಂಕ್ಷೆ ಯೋಜನೆಯಾದ ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಉತ್ಪನ್ನಗಳ ಮಾರಾಟಕ್ಕಾಗಿ ಆನ್‌ಲೈನ್ ಟ್ರೇಡಿಂಗ್ ಕುರಿತು ಗ್ರಾಮ ಮಟ್ಟದಲ್ಲಿ ರೈತ ಬಾಂಧವರಿಗೆ ಅರಿವು ಮೂಡಿಸಲು ''ರೈತರ ಜಾಗೃತಿ'' ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಕೃಷಿ ಮಾರಾಟ ಸುಧಾರಣೆ ನೀತಿ, ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಸೌಲಭ್ಯಗಳು, ಉತ್ಪನ್ನಗಳ ಗುಣ ವಿಶ್ಲೇಷಣೆ ಮತ್ತು ಪ್ರಾಥಮಿಕ ಮೌಲ್ಯವರ್ಧನೆಯಿಂದ ಆನ್‌ಲೈನ್ ಟೆಂಡರ್‌ನಲ್ಲಿ ದೊರೆಯುವ ಸ್ಪರ್ಧಾತ್ಮಕ ಧಾರಣೆ. ಈ ವೇದಿಕೆಯಲ್ಲಿ ರೈತರ ನೋಂದಣಿಗೆ ಮಾರ್ಗಸೂಚಿ, ರೈತರು ಮಾರುಕಟ್ಟೆಯಲ್ಲಿ ಅನುಸರಿಸಬೇಕಾದ ಅಂಶಗಳ ಕುರಿತು ರೈತ ಜಾಗೃತಿ ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಲಾಯಿತು. ಗ್ರಾಮ ಮಟ್ಟದ ರೈತಬಾಂಧವರು ಕೇಳುವ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರ ಕೈಪಿಡಿಯನ್ನು ಸಿದ್ಧಪಡಿಸಿ ನೀಡಲಾಯಿತು.

ಮೊದಲನೇ ಹಂತದಲ್ಲಿ ಈ ಕಾರ್ಯಕ್ರಮ 100 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆಯ್ಕೆ ಮಾಡಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿನ ಚುನಾಯಿತ ಜನಪ್ರತಿನಿಧಿಗಳ ಅಧ್ಯಕ್ಷತೆಯಲ್ಲಿ ರೈತ ಜಾಗೃತಿ ಶಿಕ್ಷಣ ಕಾರ್ಯಕ್ರಮವನ್ನು ಸುಮಾರು 10 ಸಾವಿರ ಹಳ್ಳಿಗಳಲ್ಲಿ ನಡೆಸಲಾಗಿದೆ. ಸುಮಾರು 20 ಲಕ್ಷ ರೈತರಿಗೆ ನೂತನ ವ್ಯವಸ್ಥೆಯ ಕುರಿತು ಅರಿವು ಮೂಡಿಸಲಾಗಿದೆ ಎಂದು ರೆಮ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಪ್ರಾತ್ಯಕ್ಷಿಕೆಯಲ್ಲಿ ವಿವರಿಸಿದರು.

ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿನ ಏಕೀಕೃತ ಮಾರುಕಟ್ಟೆ ವೇದಿಕೆ ಸ್ಥಾಪನೆಯಾಗಿರುವ 142 ಮಾರುಕಟ್ಟೆಗಳ, 61 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಕೃಷಿ ಮಾರಾಟ ಇಲಾಖೆಯು ರೈತನ ಉತ್ಪನ್ನಗಳ ಸ್ವಚ್ಛತೆ, ಮೌಲ್ಯವರ್ಧನೆ ಮತ್ತು ಉತ್ಪನ್ನಗಳನ್ನು ಪ್ಯಾಕ್ ಮಾಡಲು ಆಧುನಿಕ ಯಂತ್ರೋಪಕರಣಗಳ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಅವರು ಪ್ರಸ್ತಾಪಿಸಿದರು.

ರಾಜ್ಯದ 157 ಕೃಷಿ ಉತ್ಪನ್ನ ಮಾರುಕಟ್ಟೆಗಳ ಪೈಕಿ 142 ಮಾರುಕಟ್ಟೆಗಳಲ್ಲಿನ ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಆನ್‌ಲೈನ್ ಟ್ರೇಡಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದು ರಾಷ್ಟ್ರದಲ್ಲೇ ಪ್ರಪ್ರಥಮ ಎಂಬ ಕೀರ್ತಿಗೆ ಕರ್ನಾಟಕ ರಾಜ್ಯ ಪಾತ್ರವಾಗಿದೆ ಅವರು ಹೇಳಿದರು.

2014 ಫೆಬ್ರವರಿ 22ರಿಂದ ಇಲ್ಲಿಯವರೆಗೂ ಆನ್‌ಲೈನ್ ಟೆಂಡರ್‌ನಲ್ಲಿ 49 ಲಕ್ಷ ಲಾಟ್‌ಗಳಿಂದ 320 ಲಕ್ಷ ಕ್ವಿಂಟಾಲ್ ವಿವಿಧ ಉತ್ಪನ್ನಗಳ ವ್ಯಾಪಾರದಿಂದ 26 ಸಾವಿರ ಕೋಟಿ ರೂಪಾಯಿಗಳು ವಿದ್ಯುನ್ಮಾನ ವೇದಿಕೆಯಲ್ಲಿ ವಹಿವಾಟು ನಡೆದಿದೆ. ಜೊತೆಗೆ ಏಕೀಕೃತ ಮಾರುಕಟ್ಟೆ ವೇದಿಕೆಗಳಲ್ಲಿ ಇಲ್ಲಿಯವರೆಗೂ 25 ಲಕ್ಷ ರೈತರ ನೋಂದಣಿ ಮಾಡಿಕೊಳ್ಳಲಾಗಿದೆ ಎಂದು ಶ್ರೀ ಮನೋಜ್ ರಾಜನ್ ಹೇಳಿದರು.

ರಾಷ್ಟ್ರಕ್ಕೆ ಮಾದರಿಯಾದ ಕರ್ನಾಟಕ ಕೃಷಿ ಉತ್ಪನ್ನಕ್ಕೆ ಆನ್‌ಲೈನ್ ವ್ಯವಸ್ಥೆ, ಉತ್ಪನ್ನಗಳ ಗುಣಮಟ್ಟಕ್ಕೆ ಆದ್ಯತೆ ಕಲ್ಪಿಸುತ್ತಿರುವ ರೆಮ್ಸ್ ಸಂಸ್ಥೆಯ ಸೇವೆಗೆ ರಾಷ್ಟ್ರದ ನಾಗರೀಕರಿಗೆ ಗುಣಮಟ್ಟದ ಕೃಷಿ ಉತ್ಪನ್ನ ಕಲ್ಪಿಸಲು ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವ ರೆಮ್ಸ್ ಸಂಸ್ಥೆ ರಾಷ್ಟ್ರದ ಪ್ರತಿಷ್ಠಿತ ''ಡಿಎಲ್ ಶಾ - ಪ್ಲಾಟಿನಂ'' 2016ರ ಪ್ರಶಸ್ತಿಗೆ ಭಾಜನವಾಗಿದೆ ಎಂದು ಸಮ್ಮೇಳನದ ಸಂಘಟಕರು ಘೋಷಿಸಿದರು. ★